**ಎಂವಿಸಿ ಸಂಖ್ಯೆಃ 1169/2023 ಪಿಡಬ್ಲೂ:2**

**ದಿನಾಂಕಃ 16-10-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಬಾಬ್ತು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿ ಬರೆಸಿರುವ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿ ಬರೆದಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಸಾಕ್ಷಿದಾರರು ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ.

1. ನನ್ನ ಮೂಲ ಆಧಾರ ಕಾರ್ಡನ್ನು ನಿಪಿ-14 ಎಂದು ಗುರುತಿಸಲಾಯಿತು.
2. ಗಾಂಪಾಲ ಲಿಂಗಮ್ಮ ಇವಳ ಮೂಲ ಆಧಾರ ಕಾರ್ಡನ್ನು ನಿಪಿ-15 ಎಂದು ಗುರುತಿಸಲಾಯಿತು.
3. ಕುರುವ ನಿಂಗಮ್ಮಯ್ಯ ಇವರ ಮೂಲ ಆಧಾರ ಕಾರ್ಡನ್ನು ನಿಪಿ-16 ಎಂದು ಗುರುತಿಸಲಾಯಿತು.
4. ಕುರುವ ಶಿವರಾಜ ಈತನ ಮೂಲ ಆಧಾರ ಕಾರ್ಡನ್ನು ನಿಪಿ-17 ಎಂದು ಗುರುತಿಸಲಾಯಿತು.
5. ಕುರುವ ನರಸಮ್ಮ ಇವಳ ಮೂಲ ಆಧಾರ ಕಾರ್ಡನ್ನು ನಿಪಿ-18 ಎಂದು ಗುರುತಿಸಲಾಯಿತು.
6. ಕುರುವ ಪೆದ್ದಬಸವ ಇವನ ಮೂಲ ಆಧಾರ ಕಾರ್ಡನ್ನು ನಿಪಿ-19 ಎಂದು ಗುರುತಿಸಲಾಯಿತು.
7. ಕಂದಾಯ ಇಲಾಖೆಯವರು ನೀಡಿದ ವಾರಸಾ ದಾಖಲೆಯನ್ನು ನಿಪಿ-20 ಎಂದು ಗುರುತಿಸಲಾಯಿತು.
8. ಮರಣ ಪ್ರಮಾಣ ಪತ್ರವನ್ನು ನಿಪಿ-21 ಎಂದು ಗುರುತಿಸಲಾಯಿತು.
9. ಶವ ಪರೀಕ್ಷಾ ವರದಿಯನ್ನು ನಿಪಿ-22 ಎಂದು ಗುರುತಿಸಲಾಯಿತು.
10. ಶವ ತನಿಖಾ ವರದಿಯನ್ನು ನಿಪಿ-23 ಎಂದು ಗುರುತಿಸಲಾಯಿತು.

ಅರ್ಜಿಯಲ್ಲಿ ಕೇಳಿದಂತೆ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ**

ನನ್ನ ಗಂಡನ ತಂದೆ ತೀರಿಕೊಂಡಿರುತ್ತಾರೆ. ನನ್ನ ಗಂಡನ ತಾಯಿ 5 ನೇ ಅರ್ಜಿದಾರಳು ಇರುತ್ತಾಳೆ. ಅಪಘಾತವಾದಾಗ ನನ್ನ ಗಂಡನಿಗೆ 40 ವರ್ಷ ಪ್ರಾಯ ಆಗಿತ್ತು ಎಂದರೆ ನಿಜ. ಆತನದು 2 ಎಕರೆ ಜಮೀನು ಇತ್ತು. ಅದು ನೀರಾವರಿ ಜಮೀನು ಇತ್ತು. ಈಗಲೂ ಸಹ ಆ

ಜಮೀನಿನಲ್ಲಿ ಬೆಳೆ ಬೆಳೆಯುತ್ತೇವೆ ಎಂದರೆ ಸರಿ ಅಲ್ಲ. ಪಾಳು ಬಿದ್ದಿದೆ. ಬೀಳುಬಿದ್ದಿದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ ಅಲ್ಲ. ಈಗಲೂ ಸಹ ಸದ್ರಿ ಜಮೀನಿನಿಂದ ಅಷ್ಟೇ ಉತ್ಪನ್ನ ಬರುತ್ತಿದೆ ಎಂದರೆ ಸರಿ ಅಲ್ಲ. ನಾನು ಉದ್ದೇಶಪೂರ್ವಕವಾಗಿ ಸದ್ರಿ ಜಮೀನಿನ ದಾಖಲೆಯನ್ನು ಈ ಅರ್ಜಿಯಲ್ಲಿ ಸಲ್ಲಿಸಿಲ್ಲ ಎಂದರೆ ಸರಿ ಅಲ್ಲ.

ನನ್ನ ಗಂಡ ಸದ್ರಿ ವಾಹನ ಅದರ ನೋಂದಣಿ ಸಂಖ್ಯೆ ಎಪಿ-39-ಯುಎ-6442 ನೇದ್ದರಲ್ಲಿ ಪ್ರಯಾಣ ಮಾಡುತ್ತಿದ್ದ ಎಂದರೆ ನಿಜ. ಅವರು ಮೆಣಸಿನಕಾಯಿ ಲೋಡ್ ಮಾಡಿಕೊಂಡು ಮಾರಾಟ ಮಾಡುವ ಉದ್ದೇಶಕ್ಕಾಗಿ ಆ ವಾಹನದಲ್ಲಿ ಹೋಗುತ್ತಿದ್ದರು. 35 ಮೆಣಸಿನಕಾಯಿ ಚೀಲಗಳಿದ್ದವು. ನನ್ನ ಗಂಡ ವಾಹನದ ಒಳಗಡೆ ಡ್ರೈವರ್ ಪಕ್ಕದಲ್ಲಿ ಕುಳಿತಿದ್ದ. ಸದ್ರಿ ವಾಹನದಲ್ಲಿ ನನ್ನ ಗಂಡ ಪ್ರಯಾಣ ಮಾಡುತ್ತಿರಲಿಲ್ಲ ಎಂದರೆ ಸರಿ ಅಲ್ಲ. ನನ್ನ ಗಂಡನದು 35 ಚೀಲ ಮೆಣಸಿನಕಾಯಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನನ್ನ ಗಂಡ ಈತನ 35 ಚೀಲ ಮೆಣಸಿನಕಾಯಿ ಇದ್ದವು ಎಂದು ಎಲ್ಲಿಯೂ ನಮೂದಿಸಿಲ್ಲ ಎಂದರೆ ಸರಿ ಅಲ್ಲ.

ಸದ್ರಿ ಅಂತಿಮ ವರದಿಯಲ್ಲಿ ನನ್ನ ಗಂಡನ ಎಷ್ಟು ಮೆಣಸಿನಕಾಯಿ ಚೀಲಗಳು ಇದ್ದವು ಎಂದು ನಮೂದಿಸಿಲ್ಲ ಎಂದರೆ ಸರಿ ಅಲ್ಲ. ಅದಲ್ಲದೇ ಅಂತಿಮ ವರದಿಯಲ್ಲಿ ಯಾರೂ ಕೂಡ ಮೆಣಸಿನ ಚೀಲಗಳನ್ನು ತೆಗೆದುಕೊಂಡು ಹೋಗುತ್ತಿದ್ದರು ಎಂದು ನಮೂದಿಸಿಲ್ಲ ಎಂದರೆ ಸರಿ ಅಲ್ಲ. ನನ್ನ ಗಂಡ ಅನಧಿಕೃತವಾಗಿ ಆ ದಿನ ಪ್ರಯಾಣ ಮಾಡುತ್ತಿದ್ದರು ಎಂದರೆ ಸರಿ ಅಲ್ಲ. ನಾನು ಸದ್ರಿ ವಾಹನದಲ್ಲಿ ನನ್ನ ಗಂಡ ಮೆಣಸಿನಕಾಯಿ ತೆಗೆದುಕೊಂಡು ಹೋಗುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ನನ್ನ ಗಂಡ ಹೋಗುತ್ತಿದ್ದ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಸದ್ರಿ ನನ್ನ ಗಂಡ ಹೋಗುತ್ತಿದ್ದ ವಾಹನದ ಚಾಲಕನ ತಪ್ಪಿನಿಂದಾಗಿ ಅಪಘಾತ ಸಂಭವಿಸಿದ್ದರಿಂದ ಪರಿಹಾರ ಪಡೆಯಲು ನಾವು ಬಾಧ್ಯಸ್ಥರಲ್ಲ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

**ಪ್ರಭಾರ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ರಾಣೆಬೆನ್ನೂರ.**

ಸಾಕ್ಷಿದಾರರ ಸಹಿಃ